ಬರುವುದು ಒಂದು ಹಂತವಾದರೆ, ಅದು ದೇಹದಲ್ಲಿ ಅಂತರ್ಗತವಾಗುವುದು ಮತ್ತೊಂದು ಹಂತ. ಅದು ದೇಹದಲ್ಲಿ ರಕ್ತದಂತೆ, ಒಂದಾಗಿಹೋಗುತ್ತದೆ. ಹಾಗಾದಾಗ ಸಮತೋಲನವು ಸಹಜವಾಗಿ ಒದಗಿಬರುತ್ತದೆ.

ನೃತ್ಯವನ್ನು ವಾಣಿಜ್ಯೀಕರಣಗೊಳಿಸುವುದಿಲ್ಲ ಎಂದು ನಾನು ಅಜ್ಜನ ಮುಂದೆ ಪ್ರಮಾಣ ಮಾಡಿದ್ದೇನೆ. ಹಾಗಾಗಿ ನಾನು ಕಾರ್ಯಕ್ರಮ ನೀಡಿದಾಗ ದೊರೆಯುವ ಸಂಭಾವನೆಯನ್ನೆಲ್ಲ 'ಸೆಂಟರ್ ಫಾರ್ ಇಂಡಿಯನ್ ಕ್ಲಾಸಿಕಲ್ ಡಾನ್ಸ್' ಸಂಸ್ಥೆಗೆ ಕೊಟ್ಟುಬಿಡುತ್ತೇನೆ. ರಾಜ್ಯಸಭಾ ಸದಸ್ಯೆಯಾದ್ದರಿಂದ ನನಗೆ ವಸತಿ ವ್ಯವಸ್ಥೆ ಕಲ್ಪಿಸಿದ್ದಾರೆ. ಅವಧಿ ಮುಗಿದ ಬಳಿಕ ಬಾಡಿಗೆ ಮನೆಗೇ ಹೋಗೋಣ ಎಂದುಕೊಂಡಿರುವೆ.

◆ **ಕಲೆಯ ಮೌಲ್ಯ ಮತ್ತು ಕಲಾವಿದನ ನೈತಿಕತೆಯ ನಡುವೆ ಸಂಬಂಧ ಇದೆ ಎನ್ನುತ್ತೀರಾ?**

ಜೀವನದಲ್ಲಿ ಹೇಗೋ ನೃತ್ಯದಲ್ಲಿಯೂ ಶೀಲ, ನೈತಿಕತೆ ಬಹಳ ಮುಖ್ಯ ಎಂದು ನಂಬಿದವಳು ನಾನು. ಒಬ್ಬ ವ್ಯಕ್ತಿಯ ಚಾರಿತ್ರ್ಯ ನಿರ್ಮಾಣವು ತಾಯಿಯ ಗರ್ಭದಿಂದಲೇ ಆರಂಭವಾಗುತ್ತದೆ. ಪೂರ್ವಜನ್ಮ ಸಂಸ್ಕಾರವನ್ನು ಕೂಡ ನಾನು ನಂಬುತ್ತೇನೆ. ನಂತರ ಬಾಲ್ಯ, ಯೌವನ, ಶಿಕ್ಷಣ, ಕಲಿಕೆ, ಪ್ರಯಾಣ ಮುಂತಾದವುಗಳಲ್ಲೆಲ್ಲ ಅದು ಸ್ಪಷ್ಟವಾಗುತ್ತಾ ಹೋಗುತ್ತದೆ. ಹೀಗೆ ಸ್ಪಷ್ಟ ಮಾಡಿಕೊಂಡು ಪಯಣಿಸುವ ಹಾದಿಯಲ್ಲಿ ತುಸುವೇ ಎಡವಿದರೂ, ಸಣ್ಣ ಪ್ರಮಾಣದ ಉದಾಸೀನ, ಆಲಸ್ಯ, ಋಣಾತ್ಮಕತೆ ಪ್ರವೇಶಿಸಿ ನಂತರ ಅದು ದೊಡ್ಡದಾಗಿ ಬೆಳೆಯಲು ಶುರುವಾಗುತ್ತದೆ. ಆದ್ದರಿಂದ ವ್ಯಕ್ತಿಯು ಸದಾ ಜಾಗೃತಾವಸ್ಥೆಯಲ್ಲಿಯೇ ಇರಬೇಕು. ಯಾವ ಕೆಲಸವು ಯಾವ ಸಮಯಕ್ಕೆ ಆಗಬೇಕೋ, ಅದೇ ಸಮಯಕ್ಕೆ ಆಗುವಂತೆ ಎಚ್ಚರವಹಿಸಬೇಕು. ಅದರ ಪರಿಪೂರ್ಣತೆಗೆ ಶ್ರಮಿಸಬೇಕು. ಜೀವನದಲ್ಲಿ ನಮ್ರತೆಯು ಬಹಳ ಮುಖ್ಯ. ಸಾಮಾಜಿಕ ಜಾಲತಾಣಗಳ ಭರಾಟೆಯಲ್ಲಿ ಈಗ, ಸ್ವಾಧ್ಯಾಯ, ಸ್ವಯಂ ವಿಮರ್ಶೆ ಮುಂತಾದ ಗುಣಗಳನ್ನು ಉಳಿಸಿಕೊಳ್ಳುವುದು ಬಹಳ ಮುಖ್ಯ.

◆ **ಡಿಜಿಟಲ್ ಯುಗದ ಈ ಕಾಲದ ಕಲಾರಸಿಕರ ಮುಂದೆ ಶಾಸ್ತ್ರೀಯ ನೃತ್ಯ ಪ್ರಸ್ತುತಪಡಿಸುವಾಗ ಏನಾದರೂ ಬದಲಾವಣೆ ಮಾಡಿಕೊಳ್ಳಬೇಕಾಗುತ್ತದೆಯೇ?**

ಈ ಕಾಲ ಆ ಕಾಲವೆಂದಲ್ಲ. ಬದಲಾವಣೆ ಎನ್ನುವುದು ಜಗದ ನಿಯಮವೆಂದಾದರೆ ಅದನ್ನು ನಾವು ಅನುಸರಿಸಲೇಬೇಕಲ್ಲವೇ. ಇಷ್ಟಕ್ಕೂ ಕಲಾವಿದೆ ಅಥವಾ ಕಲಾವಿದನ ನಿರ್ಮಾಣ ಕಾರ್ಯವು ಆ ವ್ಯಕ್ತಿಯ ಸುತ್ತಲಿನ ಪರಿಸರವನ್ನು ಅವಲಂಬಿಸಿ ನಡೆಯುತ್ತದೆ. ಸುತ್ತಲಿನ ಆಗುಹೋಗುಗಳು ವ್ಯಕ್ತಿಯ ಮೇಲೆ ಪರಿಣಾಮ ಬೀರಿದಂತೆಯೇ ಕಲೆಯ ಪ್ರಸ್ತುತಿಯ ಮೇಲೆಯೂ ಪರಿಣಾಮ ಬೀರುತ್ತದೆ.

ನಾನು, ನನಗೆ ಏನು ಬೇಕೋ, ಅದನ್ನೇ ಮಾಡುತ್ತೇನೆ. ನನ್ನ ಈ ಸ್ವಭಾವವನ್ನು ನನ್ನ ನೃತ್ಯಗುರು ಯು.ಎಸ್. ಕೃಷ್ಣ ರಾವ್ ಅವರು ಪ್ರೋತ್ಸಾಹಿಸಿದರು. ಪಾಶ್ಚಾತ್ಯ ದೇಶಗಳಲ್ಲಿ ಮೊದಲು ನೃತ್ಯಕ್ಕೆ ಸಂಬಂಧಿಸಿದ ಕರಪತ್ರ ನೀಡಿ ಬಳಿಕ ನೃತ್ಯವನ್ನು ಹೆಚ್ಚಾಗಿ ಗುಂಪಿನಲ್ಲಿ ಪ್ರದರ್ಶಿಸಲಾಗುತ್ತದೆ. ನಮ್ಮಲ್ಲಿ ಹಾಗಿರಲಿಲ್ಲ. ನಾವು ಪ್ರಸ್ತುತಪಡಿಸುವ ನೃತ್ಯದ ಪ್ರತಿಯೊಂದು ಸಂಚಾರಿಯನ್ನೂ ಪ್ರೇಕ್ಷಕರಿಗೆ ಪೂರ್ವದಲ್ಲಿಯೇ ವಿವರಿಸಲು ಸಾಧ್ಯವಿಲ್ಲ. ವಿಚಾರ, ವಾಣಿ, ವ್ಯವಹಾರ – ಈ ಮೂರೂ ಸಕಾಲಕ್ಕೆ ಪರಿಷ್ಕರಣೆಗೊಳ್ಳುತ್ತಲೇ ಇರಬೇಕು, ಅವುಗಳಿಗೆ ಅಂಟುವ ಋಣಾತ್ಮಕತೆಯನ್ನು ತೊಡೆದು ಹಾಕುತ್ತಿರಬೇಕು ಎಂದು ನಂಬಿದವಳು ನಾನು.

◆ **ನೀವು ಕೈಗೆತ್ತಿಕೊಳ್ಳುವ ಪ್ರಸ್ತುತಿಗಳು ಮಹಿಳಾ ಕೇಂದ್ರಿತವಾಗಿವೆ. ಏಕೆ?**

ಹೌದು. ನಾನು ದೇವಿ, ದ್ರೌಪದಿ, ಪಂಚಕನ್ಯಾ, ನದಿ ಮಾಲಿನ್ಯ (ಕೃಷ್ಣ ಕಾಲಿಯಾ) ಮುಂತಾದ ವಿಷಯಗಳನ್ನು ಆಧರಿಸಿದ ಕಥೆಗಳನ್ನು ಕೈಗೆತ್ತಿಕೊಂಡು ಹೊಸ ರೀತಿಯಲ್ಲಿ ಪ್ರಸ್ತುತಿಗಳನ್ನು ರೂಪಿಸಿರುವೆ. ಇಂದು ಜನರು ಹೆಚ್ಚು ಒತ್ತಡದ ಜೀವನ ನಡೆಸುತ್ತಿದ್ದಾರೆ. ಭಾವನಾತ್ಮಕವಾಗಿ ದಣಿದಿದ್ದಾರೆ. ಹಾಗಿದ್ದರೆ ನೃತ್ಯವು ಅವರ ಮನಸ್ಸನ್ನು ಹಗುರಗೊಳಿಸುವಂತೆ ಇರಬೇಕು. ಅವರನ್ನು ಭಾವನಾತ್ಮಕವಾಗಿ, ದೈಹಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಮೇಲೆತ್ತುವ ಮಾದರಿಯಲ್ಲಿ ಪ್ರಸ್ತುತಗೊಳ್ಳಬೇಕು. ಪರೋಕ್ಷ ಶಿಕ್ಷಣವೂ ಆಗಿರಬೇಕು ಎಂದು ಭಾವಿಸುವೆ.